		೨೦೦೬-೦೭ನೇ ಸಾಲಿನಲ್ಲಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ನೇಕಾರರು ಪಟ್ಟಣ ಸಹಕಾರಿ ಬ್ಯಾಂಕುಗಳಿಂದ ಪಡೆದ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡಲು ಲಭ್ಯವಿದ್ದ ಅನುದಾನದ ಪೈಕಿ ರೂ ೬೦೦ ಕೋಟಿಗಳನ್ನು ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಈಗಾಗಲೇ ಬಿಡುಗಡೆಗೊಳಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೬೮

ಸದಸ್ಯರ ಹೆಸರು ಶ್ರೀ ಪ್ರಕಾಶ್ ಖಂಡ್ರೆ

ಉತ್ತರಿಸುವ ಸಚಿವರು ಶ್ರೀ ಬಂಡೆಪ್ಪ ಖಾಶೆಂಪೂರ (ಕೃಷಿ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಭಾಲ್ಕಿ ತಾಲ್ಲೂಕಿನಲ್ಲಿ ಸಾಲದ ಬಾಧೆಯಿಂದ ಇದುವರೆಗೆ ಆತ್ಮಹತ್ಯೆ ಮಾಡಕೊಂಡಿರುವ ರೈತರೆಷ್ಟು?	ಭಾಲ್ಕಿ ತಾಲ್ಲೂಕಿನಲ್ಲಿ ಈವರೆಗೆ ಸಾಲದ ಬಾಧೆಯಿಂದ ೧೭ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದೆ
ಆ)	ಆತ್ಮಹತ್ಯೆ ಮಾಡಕೊಂಡಿರುವ ರೈತರ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ಧನ ನೀಡಲಾಗಿದೆಯೇ?	ಎರಡು ಪ್ರಕರಣಗಳಿಗೆ ಮಾತ್ರ ನೀಡಲಾಗಿದೆ

ಇ)	ಹಗಿದ್ದಲ್ಲಿ ಇಲ್ಲಿಯವರೆಗೆ ಪರಿಹಾರ ಧನ ನೀಡಲಾದ ರೈತರ ಸಂಖ್ಯೆ ಎಷ್ಟು (ವಿವರ ನೀಡುವುದು)	೧೭ ಆತ್ಮಹತ್ಯೆ ಪ್ರಕರಣಗಳ ಪೈಕಿ ಈವರೆವಿಗೆ ಸಮಿತಿಯು ಅರ್ಹ ಪ್ರಕರಣವೆಂದು ತೀರ್ಮಾನಿಸಿದ ಈ ಕೆಳಕಂಡ ೨ ಪ್ರಕರಣಗಳಿಗೆ ಮಾತ್ರ ತಲಾ ರೂ ೧,೦೦ ಲಕ್ಷಗಳಂತೆ ಪರಿಹಾರ ವಿತರಿಸಲಾಗಿದೆ ೧ ಶ್ರೀಮತಿ ಬಿ ಪಾಶಾಬಿ, ಗಂಡ ಜಾಫರ್ ಸಾಬ್, ಕಂಜಿ ಗ್ರಾಮ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ೨ ಶ್ರೀ ಗಣಪತಿ, ತಂದೆ ಲಾಲಪ್ಪ, ಹಾಲಹಳ್ಳಿ ಗ್ರಾಮ (ಕೆ) ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೭೦

ಸದಸ್ಯರ ಹೆಸರು ಶ್ರೀ ರಾಜೇಂದ್ರವರ್ಮ (ಹುಲಸೂರು)

ಉತ್ತರಿಸುವ ಸಚಿವರು ಶ್ರೀ (ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಅಳವೆ ಮೂಲು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಬೇನಾಮಿ ಸಾಲ ನೀಡಿಕೆ , ನಂಚನೆ ಇಯಾದಿ ಪತ್ತೆಯಾಗಿರುವ ಅವ್ಯವಹಾರ ಮತ್ತು ಕ್ರಿಮಿನಲ್	ಕಳೆದ ೩ ವರ್ಷಗಳಲ್ಲಿ (೨೦೦೩-೦೪, ೨೦೦೪-೦೫ , ೨೦೦೫-೦೬) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಯಾವುದೇ ಬೇನಾಮಿ ಸಾಲ ನೀಡಿಕೆ ಪ್ರಕರಣಗಳು ದಾಖಲಾಗಿರುವುದಿಲ್ಲ ೨೦೦೩-೦೪ನೇ ಸಾಲಿನಲ್ಲಿ ಅಪೆಕ್ಸ್ ಬ್ಯಾಂಕಿನ ಲಕ್ಕಸಂದ್ರ ಶಾಖೆಯಲ್ಲಿ ಗುಮಾಸ್ತರಾಗಿ ಕೆಲಸ ನಿರ್ವಹಿಸುತ್ತಿದ್ದ